ದಿನಾಂಕಃ 14-03-2017 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.
ಪಾಟೀ ಸವಾಲುಃ ಶ್ರೀ ಎಸ್ ಜೆ ಎನ್ ವಕೀಲರಿಂದಃ

ಈ ಸಾಲ ಮಂಜೂರಾಗುವ ಸಮಯದಲ್ಲಿ ನಾನು ಅರ್ಜಿದಾರ ಸಂಸ್ಥೆಯ ಪ್ರಭಾರ ಸಿ ಇ ಒ ಆಗಿದ್ದೆ. ಆ ಸಮಯದಲ್ಲಿ ಸಾಲ ಮಂಜೂರಾತಿ ಮಾಡಬೇಕಾದರೆ ಯಾವ ಯಾವ ನಿಯಮಗಳಿದ್ದವು ಎಂದು ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲಾ. ನಮ್ಮ ಸಂಸ್ಥೆಯಿಂದ ಸಾಲ ಮಂಜೂರಾಗಬೇಕಾದರೆ ನಿರ್ದೇಶಕರ ಮಂಡಳಿಯ ಮುಂದೆ ಮಂಜೂರಾಗಬೇಕಾಗುತ್ತದೆ ಎಂದರೆ ಸರಿ. ಆ ರೀತಿ ಸಾಲ ಮಂಜೂರಾತಿ ಮಾಡಬೇಕಾದರೆ ಕಾನೂನು ಸಲಹೆ ತೆಗೆದುಕೊಳ್ಳುತ್ತೇವೆ ಎಂದರೆ ಅಡಮಾನ ಸಾಲಕ್ಕೆ ಮಾತ್ರ ತೆಗೆದುಕೊಳ್ಳುತ್ತೇವೆ. ಈ ಅರ್ಜಿಯ ಸಾಲ ವೈಯಕ್ತಿಕ ಸಾಲವಾಗಿದ್ದರಿಂದ ಕಾನೂನು ಸಲಹೆ ತೆಗೆದುಕೊಂಡಿರುವುದಿಲ್ಲಾ. ನಾವು ಸಾಲ ಮಂಜೂರಿ ಮಾಡಬೇಕಾದರೆ ಸಾಲಗಾರರಿಗೆ ಸೇರಿದ ಆಸ್ತಿ ಪಾಸ್ತಿಗಳನ್ನು ಒತ್ತೆ ಇಟ್ಟುಕೊಳ್ಳುತ್ತೇವೆ ಎಂದರೆ ಇದ್ದರೆ ಒತ್ತೆ ಇಟ್ಟುಕೊಳ್ಳುತ್ತೇವೆ. ಯಾವುದೇ ಆಸ್ತಿ ಇಲ್ಲದಿದ್ದರೇ ಪಿಗ್ಮಿ ಅಥವಾ ಠೇವಣಿಯನ್ನು ಒತ್ತೆ ಇಟ್ಟುಕೊಳ್ಳುತ್ತೇವೆ. ಈ ಪ್ರಕರಣದಲ್ಲಿ ಯಾವುದೇ ಆಸ್ತಿಯನ್ನು ಒತ್ತೆ ಇಟ್ಟುಕೊಂಡಿಲ್ಲಾ. ಈ ಪ್ರಕರಣದ ಸಾಲಗಾರ ಯಾವುದೇ ಆಸ್ತಿಯನ್ನು ಕೊಡದಿದ್ದ ಕಾರಣ ಯಾವುದೇ ಆಸ್ತಿ ಒತ್ತೆಇಟ್ಟುಕೊಂಡಿರುವುದಿಲ್ಲಾ. ಆಸ್ತಿ ಒತ್ತೆ ಇಟ್ಟುಕೊಳ್ಳದೇ ಸಾಲ ಮಂಜೂರಿ ಮಾಡಲು ಬರುವುದಿಲ್ಲಾ ಎಂದರೆ ಸರಿಯಲ್ಲಾ. ಆ ಕಾರಣದಿಂದ ಎದುರುದಾರರಿಗೆ ಈ ಪ್ರಕರಣದ ಸಾಲವನ್ನು ಕೊಡಲು ಬರುವುದಿಲ್ಲಾ ಎಂದರೆ ಸರಿಯಲ್ಲಾ. ಸದರಿ ಸಾಲವನ್ನು ನೀಡುವಾಗ ನಾವು ಸಾಲಗಾರನಿಂದ ಸಾಲದ ಕರಾರು ಪತ್ರ ಜಾಮೀನು ಪತ್ರ ಮತ್ತು ಬಾಂಡ್‌ಗಳನ್ನು ಪಡೆದುಕೊಂಡಿದ್ದೇವೆ. 1 ರಿಂದ 3ನೇ ಎದುರುದಾರರು ಯಾವ ಯಾವ ಕೆಲಸ ಮಾಡುತ್ತಾರೆ ಎಂದು ದಾಖಲೆ ಪಡೆದುಕೊಂಡಿಲ್ಲಾ ಎಂದರೆ ಸರಿಯಲ್ಲಾ. ಅಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ಯಾವುದೇ ತೊಂದರೆ ಇರಲಿಲ್ಲಾ ಎಂದರೆ ಸರಿ. ನಾವು ಎದುರುದಾರರಿಗೆ ಸಾಲ ಕೊಡುವ ಸಂದರ್ಭದಲ್ಲಿ ಅವರಿಂದ ಯಾವುದೇ ಆದಾಯಪ್ರಮಾಣಪತ್ರ ತೆಗೆದುಕೊಂಡಿಲ್ಲಾ ಎಂದರೆ ಸರಿ. ಎದುರುದಾರರಿಗೆ ಆದಾಯವು ಮೀನು ವ್ಯಾಪಾರದಿಂದ ಬರುತ್ತದೆ. ಅದರ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲಾ ಎಂದರೆ ಸರಿ. ಎದುರುದಾರರಿಗೆ ಇಂತಿಷ್ಟು ಆದಾಯ ಬರುತ್ತದೆ ಎಂದು ಅಂದಾಜಿನ ಮೇಲೆ ಹೇಳುತ್ತಿದ್ದೇನೆ

ಎಂದರೆ ಅದಕ್ಕಿಂತಲೂ ಹೆಚ್ಚಿನ ಆದಾಯ ಬರುತ್ತದೆ. ಎದುರುದಾರರಿಗೆ ಎಷ್ಟು ಆದಾಯ ಬರುತ್ತದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲಾ. ಎದುರುದಾರರಿಗೆ ಯಾವುದೇ ಸ್ಥಿರಾಸ್ತಿಗಳು ಇಲ್ಲಾ ಎಂದರೆ ಸರಿಯಲ್ಲಾ. ಎದುರುದಾರರಿಗೆ ಆಸ್ತಿ ಇದ್ದ ಬಗ್ಗೆ ಪಹಣಿಪತ್ರಿಕೆಗಳನ್ನು ಹಾಜರಪಡಿಸಿಲ್ಲಾ ಎಂದರೆ ಅವಶ್ಯಕತೆ ಇದ್ದರೆ ಹಾಜರಪಡಿಸುತ್ತೇನೆ. ನ್ಯಾಯಾಲಯದಿಂದ ಜಪ್ತಿಗೆ ಹೋದಾಗ ಎದುರುದಾರರಿಗೆ ಯಾವುದೇ ಬೆಲೆಬಾಳುವ ಆಸ್ತಿ ಇಲ್ಲಾ ಎಂದು ವರದಿ ಬಂದಿದೆ ಎಂದರೆ ಸರಿಯಲ್ಲಾ. ಆದ್ದರಿಂದ ಎದುರುದಾರರಿಗೆ ಯಾವುದೇ ಆಸ್ತಿ ಅಥವಾ ಆದಾಯ ಇಲ್ಲಾ ಎಂದರೆ ಸರಿಯಲ್ಲಾ. ಆ ಕಾರಣದಿಂದ ಎದುರುದಾರರು ಯಾವುದೇ ಆಸ್ತಿ ಇಲ್ಲದೇ ದಿವಾಳಿಯಾಗಿದ್ದಾರೆ ಎಂದರೆ ಸರಿಯಲ್ಲಾ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲಾ. ಎದುರುದಾರರಿಗೆ ಯಾವುದೇ ಆಸ್ತಿ ಇಲ್ಲದ ಕಾರಣ ಅವರನ್ನು ಸಿವಿಲ್ ತುರಂಗಕ್ಕೆ ಕಳುಹಿಸಲು ಬರುವುದಿಲ್ಲಾ ಎಂದರೆ ಸರಿಯಲ್ಲಾ,

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆ. ಸಿವಿಲ್ ಜಡ್ಜ್ ಕುಮಟಾ.